ಕೆ.ಸಿ.ಡಿ.

# ಸಮಾಚಾರ

ಶಿಕ್ಷಣ–ಸಂಸ್ಕೃತಿ–ಸಮಾಜ
ನಮ್ಮ ಧ್ಯೇಯ, ನಿಷ್ಠೆ

KCD JOURNALISM CLUB DHARWAD

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ: 3 ಸಂಪುಟ: 1 ಪುಟ: 1


## ೯೯ನೇ ಕರ್ನಾಟಕ ಕಲಾ ಮಹಾವಿದ್ಯಾಲಯದ ಸಂಸ್ಥಾಪಕರ ದಿನಾಚರಣೆ



ಪ್ರಾಚಾರ್ಯರಾದ ಡಾ. ಎಸ್.ಎಸ್.ಕಟ್ಟಿಮನಿ, ಸಿ.ಎಫ್.ಮೂಲಿಮನಿ, ಡಾ.ರಾಜೇಶ್ವರಿ ಮಹೇಶ್ವರಯ್ಯ, ಡಾ.ಅರುಣಾ ಹಳ್ಳಿಕೇರಿ, ಡಾ.ಮಳಿಮಠ ಚಿತ್ರದಲ್ಲಿದ್ದಾರೆ.

ಉತ್ತರ ಕರ್ನಾಟಕದ ಜನರ ಶೈಕ್ಷಣಿಕ ಆಶೋತ್ತರಗಳನ್ನು ಪೂರೈಸಲು ಕರ್ನಾಟಕ ಮಹಾವಿದ್ಯಾಲಯವನ್ನು ಸ್ಥಾಪಿಸಲು ಕಾರಣ–ರಾದ ದಿವಾನ ಬಹೂದ್ದೂರ ರೊದ್ದ ಶ್ರೀನಿವಾಸ ರಾಯರು, ದಿವಾನ ಬಹೂದ್ದೂರ ಅರಟಾಳ ರುದ್ರಗೌಡರು ಮತ್ತು ಸರ್ ಸಿದ್ದಪ್ಪ ಕಂಬಳಿ ಅವರ ಕಾರ್ಯ ಸ್ಮರಿಸಬಹುದಾದಂತ ಮಹತ್ವದ ಕಾರ್ಯವನ್ನು ಮಾಡಿದ್ದಾರೆ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್.ಎಸ್ ಕಟ್ಟಿಮನಿ ಅಭಿಪ್ರಾಯಪಟ್ಟರು. ಅವರು 99ನೇ ಕರ್ನಾಟಕ ಕಲಾ ಮಹಾವಿದ್ಯಾಲಯದ ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ಮಹಾವಿದ್ಯಾಲಯದ ಆವರಣದಲ್ಲಿರು ಮೂರು ಮಹನೀಯರ ಮೂರ್ತಿಗಳಿಗೆ ಮಾಲಾರ್ಪಣೆ ಮಾಡಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಒಂದು ಶಿಕ್ಷಣ ಸಂಸ್ಥೆ ಅಗಾಧವಾಗಿ ಬೆಳೆಯಬೇಕಾದರೆ ಅಲ್ಲಿಯ ಶೈಕ್ಷಣಿಕ ಗುಣಮಟ್ಟ ಭೋಧನಾ ಸಾಮರ್ಥ್ಯ ಮತ್ತು ಕಾರ್ಯದಕ್ಷತೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಆದ್ದರಿಂದ ಈ ಭಾಗದ ಜನರ ಕನಸುಗಳನ್ನು ನನಸು ಸಕಾರಗೊಳಿಸುವ ಸಲುವಾಗಿ ಕರ್ನಾಟಕ ಮಹಾವಿದ್ಯಾಲಯವನ್ನು 1917 ರಂದು ಪ್ರಾರಂಭಿಸಲಾಯಿತು. ಇಂದು ಶತಮಾನದ ಹೊಸ್ತಿಲಲ್ಲಿ ಕರ್ನಾಟಕ ಮಹಾವಿದ್ಯಾಲಯವ ನಿಂತಿದೆ. ಈ ಕರ್ನಾಟಕ ಮಹಾ ವಿದ್ಯಾಲಯವು ಇಂದು ರಾಜ್ಯದಲ್ಲೇ ಅತಿ ಹೆಚ್ಚು ವಿಷಯಗಳನ್ನು ಹೊಂದಿದ ಖ್ಯಾತಿಯನ್ನು ಹೊಂದಿದ್ದು, ಒಂಬತ್ತು ಸ್ನಾತ್ತಕೋತ್ತರ ವಿಷಯಗಳನ್ನು ಹೊಂದಿದೆ. ಹಾಗಾಗಿ ಇಂದು ಒಂದು ಸಂಶೋಧನಾ ಕೇಂದ್ರವಾಗಿ ಬೆಳೆದು ನಿಂತಿದೆ ಎಂದು ಹರ್ಷ ವ್ಯಕ್ತಪಡಿಸಿದರು. ಇವತ್ತು ಈ ಮಹಾವಿದ್ಯಾಲಯವು ಬೆಳೆಯಲು ಕಾರಣ–ರಾದ ಪ್ರೊ. ಅರ್ಮಾಂಡೋ ಮೇನೇಜಿಸ್, ಡಾ. ವಿ.ಕೃ. ಗೋಕಾಕ ಮತ್ತು ಡಾ. ಡಿ.ಸಿ ಪಾವಟೆ ಅವರ ಪಾತ್ರ ಮಹತ್ವವಾಗಿದೆ ಎಂದು ಈ ಸಂದರ್ಭದಲ್ಲಿ ಅವರನ್ನು ಸ್ಮರಿಸಿದರು.

ಮಹಾವಿದ್ಯಾಲಯದ ಉಪಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ವಿದ್ಯಾರ್ಥಿಗಳಾದ ನಾವು ನಮ್ಮ ಪೂರ್ವಜರ ಇತಿಹಾಸ ಹಿನ್ನಲೆ ತಿಳಿದುಕೊಳ್ಳವುದು ಅವಶ್ಯವಾಗಿದ್ದು, ಈ ನಿಟ್ಟಿನಲ್ಲಿ ಮಹಾವಿದ್ಯಾಲಯದಲ್ಲಿ ಸರಣಿ ಉಪನ್ಯಾಸ ಮಾಲೆಯನ್ನು ಏರ್ಪಡಿಸಲು ಚಿಂತನೆ ನಡೆದಿದೆ ಎಂದ ಅವರು ವಿದ್ಯಾರ್ಥಿಗಳಾದ ತಾವು ಭವಿಷ್ಯತ್ತಿನಲ್ಲಿ ಉತ್ತಮ ಪ್ರಜೆಗಳಾಗಿ ಮಹಾವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿ ಎಂದು ಕಿವಿ ಮಾತು ಹೇಳಿದರು. ಈ ಸಂದರ್ಭದಲ್ಲಿ ಕಲಾ ಮತ್ತು ವಿಜ್ಞಾನ ಮಹಾ ವಿದ್ಯಾಲಯದ ಶಿಕ್ಷಕ ಮತ್ತು ಶಿಕ್ಷಕೇತ್ತರ ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. ಡಾ. ಅರುಣಾ ಹಳ್ಳಿಕೇರಿ ಕಾರ್ಯಕ್ರಮವನ್ನು ನಿರೂಪಿಸಿದರು ಮತ್ತು ಡಾ. ಮಳೀಮಠ ವಂದಿಸಿದರು.

–ಅಭಿಷೇಕ್
5ನೇ ಸೆಮಿಸ್ಟರ್

## 2016ರ ಎನ್.ಎಸ್.ಎಸ್. ಕಾರ್ಯಚಟುವಟಿಕೆಗಳ ಉದ್ಘಟನಾ ಸಮಾರಂಭ



ಚಿತ್ರದಲ್ಲಿ ಜನಪದ ವಿಶ್ವವಿದ್ಯಾಲಯದ ಕುಲಪತಿ ಡಾ ಕೆ ಚಿನ್ನಪ್ಪಗೌಡ ಮಾತನಾಡುತ್ತಿರುವದು, ಡಾ. ಎಂ.ಆರ್.ಹೀರೆಮಠ, ಡಾ ರಾಜೇಶ್ವರಿ ಮಹೇಶ್ವರಯ್ಯ, ಉಪವಿಭಾಗಾಧಿಕಾರಿ ಮಹೇಶ ಕರ್ಜಗಿ, ಡಾ.ಬಿ.ಎಸ್.ಭಜಂತ್ರಿ ಮತ್ತು ವಿದ್ಯಾರ್ಥಿ ಕಾರ್ಯದರ್ಶಿಗಳು ಇದ್ದಾರೆ.

ಸಿಕ್ಕ ಅವಕಾಶಗಳನ್ನು ಸಮರ್ಪಕವಾಗಿ ಸದುಪಯೋಗ ಪಡಿಸಿಕೊಂಡಾಗ ಮಾತ್ರ ಆ ವಿದ್ಯಾರ್ಥಿ ಜೀವನ ಸಫಲವಾಗುವುದು ಆದ್ದರಿಂದ ವಿದ್ಯಾರ್ಥಿಗಳ ದೆಸೆಯಿಂದಲೆ ಪಠ್ಯತೇರ ಚಟುವಟಿ–ಕಗಳಲ್ಲಿ ಭಾವಹಿಸುವುದರಿಂದ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಗೆ ಸಾಧ್ಯವಾಗುತ್ತದೆ ಎಂದು ಗೊಟಗೋಡಿಯ ಕರ್ನಾಟಕ ಜನಪದ ವಿಶ್ವವಿದ್ಯಾಲಯದ ಕುಲಪತಿ ಡಾ ಕೆ. ಚಿನ್ನಪ್ಪಗೌಡ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಕನ್ನಡ ವಿಭಾಗದ ಕರ್ನಾಟಕ ಸಂಘದ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ (ಎನ್.ಎಸ್. ಎಸ್) 2016–17 ಸಾಲಿನ ಘಟಕ ಕಾರ್ಯಚಟುವಟಿ–ಕೆಗಳ ಉದ್ಘಟನಾ ಸಮಾರಂಭವನ್ನು ಉಧ್ಘಾಟಿಸಿ ಮಾತನಾಡುತಿದ್ದರು. ಒಂದು ಶಿಕ್ಷಣ ಸಂಸ್ಥೆ ಧೀರ್ಘ ಪರಂಪರೆಯನ್ನು ಹೊಂದಬೇಕಾದರೆ ಅದು ಸಮಾಜಕ್ಕೆ ತನ್ನದೇ ಆದ ಕೊಡುಗೆ ನೀಡುವುದರ ಮೂಲಕ ಇಂದು ಕರ್ನಾಟಕ ಕಲಾ ಮಹಾವಿದ್ಯಾಲಯವು ಕನ್ನಡ ಮನಸ್ಸುಗಳನ್ನು ಕಟ್ಟಿ ಬೇಳಸಿದ ಕೀರ್ತಿ ಈ ಮಹಾವಿದ್ಯಾಲಯಕ್ಕೆ ಸಲ್ಲುತ್ತದೆ ಎಂದರು. ಹೊಸ ಕಾಲಘಟ್ಟದಲ್ಲಿ ಹೊಸ ಹೊಸ ಚಿಂತನೆಗಳನ್ನು ನಿಮ್ಮ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಆತ್ಮವಿಶ್ವಾಸ ಹೆಚ್ಚಿಸುವುದರ ಜೊತೆಗೆ ನಿಮ್ಮ ಶೈಕ್ಷಣಿಕ ಪ್ರಗತಿಗೆ ಸಾಧ್ಯವಾಗುತ್ತದೆ ಎಂದ ಅವರು ಇಂದು ವಿದ್ಯಾರ್ಥಿಗಳನ್ನು ರೂಪಿಸುವ ಪ್ರಾಧ್ಯಾಪಕರ ಪಾತ್ರ ಬಹಳ ಮುಖ್ಯವಾಗಿದ್ದು, ಹೊಸ ಹೊಸ ಪ್ರಯೋಗಗಳ ಮೂಲಕ ವಿದ್ಯಾರ್ಥಿಗಳ ಮನಸ್ಸನ್ನು ಶಿಕ್ಷಕರು ಗೆಲ್ಲಬೇಕು ಎಂದರು. ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಧಾರವಾಡದ ಉಪವಿಭಾಗಾಧಿಕಾರಿ ಮಹೇಶ ಕರ್ಜಗಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಚಿಂತನ ಶೀಲ ಮನೋಭಾವನೆ ಬೆಳಿಸಿಕೊಳ್ಳಬೇಕು ಎಂದ ಅವರು ಹುಬ್ಬಳ್ಳಿ ಧಾರವಾಡ ಸ್ಮಾರ್ಟ ಸಿಟಿ' ಯೋಜನೆಗೆ ಸೇರ್ಪಡೆಯಾದ ಬಗ್ಗೆ ವಿದ್ಯಾರ್ಥಿ ಜೊತೆ ಹಂಚಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ ರಾಜೇಶ್ವರಿ ಮಹೇಶ್ವರಯ್ಯ ಮಾತನಾಡಿ ಈ ಕೆಂಪು ಕೋಟೆಗೆ ಬಂದ ವಿದ್ಯಾರ್ಥಿಗಳು ತಮ್ಮ ಆಸೆ–ಆಕಾಂಕ್ಷೆಗಳನ್ನು ಈಡೆರಿಸಿಕೊಳ್ಳಿ ಎಂದರು. ಡಾ ಮಹಾದೇವಿ ಹೀರೆಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಬಿ. ಎಸ್. ಭಜಂತ್ರಿ ಎನ್. ಎಸ್.ಎಸ್. ಕಾರ್ಯಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಕಾರ್ಯದರ್ಶಿಗಳು ಹಾಜ–ರಿದ್ದರು. ಕಾರ್ಯಕ್ರಮವನ್ನು ಶಿಲ್ಪಾ ಮತ್ತು ನವೀನ ನಿರೂಪಿಸಿದರು. ಪ್ರಭಾವತಿ ಕೋಕಾಟಿ ವಂದನಾರ್ಪಣೆ ಮಾಡಿದರು.

–ರೋಹಿನಿ
3ನೇ ಸೆಮಿಸ್ಟರ್

## 'ರಾಜ್ಯಕ್ಕೆ ಪ್ರಥಮ ಪ್ರಶಸ್ತಿ ಪಡೆದ ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿಗಳು'




ಟ್ರೋಫಿಯೊಂದಿಗೆ ಡಾ ವಾಮದೇವ ಟಿ.ಹೆಚ್ ಪ್ರೊ. ಎ.ಆರ್.ಯಾರ್ದಿ ಪ್ರಾಚಾರ್ಯರಾದ ಡಾ ಎಸ್ ಎಸ್ ಕಟ್ಟಿಮನಿ, ಉಪ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ರೆಡ್ ಕ್ರಾಸ್ ಅಧಿಕಾರಿ ಸ್ಟೇಲ್ಲಾ ಸ್ಟಿವನ್ ಇದ್ದಾರೆ

ಕರ್ನಾಟಕ ಕಲಾ ಮಹಾವಿದ್ಯಾಲಯದ ಯುತ್ ರೆಡ್ ಕ್ರಾಸ ಸಂಸ್ಥೆಯ ವತಿಯಿಂದ ಕರ್ನಾಟಕ ವಿಶ್ವವಿದ್ಯಾಲಯದ ಅಂತರ ಮಹಾವಿದ್ಯಾಲಯದ ರಸಪ್ರಶ್ನೆ ಸ್ಪರ್ಧೆಯಲ್ಲಿ ಆಯ್ಕೆಗೊಂಡ ಕರ್ನಾಟಕ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಶಾಖೆಯ ಭಾರತೀಯ ರೆಡ್ ಕ್ರಾಸ್ ಸೊಸೈಟಿಯು ೩೦–೦೯–೨೦೧೬ ರಂದು ಬೆಂಗಳೂರನಲ್ಲಿ ಆಯೋಜಿಸಿದ ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿಗಳಾದ ದತ್ತನಿರಂಜನ್ ಮತ್ತು ಮಂಜುನಾಥ.ಸಿ ರಸಪ್ರಶ್ನೆ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮ ಪ್ರಶಸ್ತಿಯನ್ನು ಪಡೆದಿದಾರೆ. ಈ ಸಂದರ್ಭದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್. ಎಸ್. ಕಟ್ಟಿಮನಿ ಮತ್ತು ಉಪ ಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ ಮತ್ತು ಕರ್ನಾಟಕ ಕಲಾ ಮಹಾವಿದ್ಯಾಲಯದ ಯುತ್ ರೆಡ್‌ಕ್ರಾಸ್‌ನ ಕಾರ್ಯಕ್ರಮ ಅಧಿಕಾರಿಗಳಾದ ಡಾ.ವಾಮದೇವ ಹೆಚ್.ಟಿ ಮತ್ತು ಡಾ. ಸ್ಟೇಲಾ ಸ್ಟಿವನ್ ವಿದ್ಯಾರ್ಥಿಗಳಿಗೆ ಶುಭ ಕೋರಿದ್ದಾರೆ.

–ಕುಮಾರ್
3 ನೇ ಸೆಮಿಸ್ಟರ್

## 'ಚರ್ಚಾ ಸ್ಪರ್ಧೆಯಲ್ಲಿ ಸ್ನೇಹಾ ಗೆ ಪ್ರಥಮ ಸ್ಥಾನ'



ಕರ್ನಾಟಕ ಕಲಾ ಮಹಾವಿದ್ಯಾಲಯದ ಬಿ. ಕಾಂ ಪ್ರಥಮ ವರ್ಷದ ವಿದ್ಯಾರ್ಥಿನಿ ಸ್ನೇಹಾ ಪಿ.ಆರ್. ಹುಬ್ಬಳ್ಳಿಯ ಜೈನ್ ಕಾಲೇಜಿನಲ್ಲಿ ನಡೆದ ನಿರ್ವಣಾ ಉತ್ಸವ(ಕಾನ್‌ಕ್ಲೇಡ್)ದಲ್ಲಿ ಮಾನವ ಸಂಪನ್ಮೂಲ ವಿಷಯದ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾಳೆ. ಇವಳ ಸಾಧನೆಯನ್ನು ಮೆಚ್ಚಿ ಕಾಲೇಜಿನ ಪ್ರಾಚಾರ್ಯರಾದ ಡಾ. ಎಸ್.ಎಸ್. ಕಟ್ಟಿಮನಿ, ಉಪಪ್ರಾಚಾರ್ಯರಾದ ಡಾ. ರಾಜೇಶ್ವರಿ ಮಹೇಶ್ವರಯ್ಯ, ಕಾಲೇಜಿನ ಶಿಕ್ಷಕರು ಮತ್ತು ವಿದ್ಯಾರ್ಥಿ ಮಿತ್ರರು ಅವಳನ್ನು ಅಭಿನಂದಿಸಿದ್ದಾರೆ.

–ಐಶ್ವರ್ಯ
3ನೇ ಸೆಮಿಸ್ಟರ್


ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ. ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಅಭಿಷೇಕ್, ಅಂಕಿತ. ಪುಟ ವಿನ್ಯಾಸ: ಶ್ರೀಹರಿ.